# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 785
ಸದಸ್ಯರ ಹೆಸರು : ಶ್ರೀ ಬಿ.ಜಿ.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾಗಿದ ದಿನಾಂಕ : 10-03-2026
ಉತ್ತರಿಸುವ ಸಚಿವರು : ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು.

| ಕ್ರ. ಸಂ | ಪ್ರಶ್ನೆಗಳು | ಉತ್ತರ |
|---|---|---|
| (ಅ) | ಕಲಬುರಗಿ ಮಹಾನಗರ ಪಾಲಿಕೆಯಲ್ಲಿ ಕುಡಿಯುವ ನೀರನ್ನು ಪರೀಕ್ಷಿಸಲು ಸರ್ಕಾರಿ ಪ್ರಯೋಗಾಲಯವಿದೆಯೇ; ಇದ್ದಲ್ಲಿ ಎಲ್ಲಿದೆ; ನೀರಿನ ಗುಣಮಟ್ಟ ಪರೀಕ್ಷಿಸಲಾಗುತ್ತಿದೆಯೇ; ಎಷ್ಟು ದಿನಗಳಿಗೊಮ್ಮೆ ನೀರಿನ ಗುಣಮಟ್ಟವನ್ನು ಪರೀಕ್ಷಿಸಲಾಗುತ್ತಿದೆ ಹಾಗೂ ಸದರಿ ಪ್ರಯೋಗಾಲಯದಲ್ಲಿ ಎಷ್ಟು ಸಿಬ್ಬಂದಿಗಳನ್ನು ನೇಮಿಸಲಾಗಿದೆ; | ಕಲಬುರಗಿ ಮಹಾನಗರ ಪಾಲಿಕೆ ವ್ಯಾಪ್ತಿಯ ಕುಡಿಯುವ ನೀರು ಜಲಶುದ್ಧೀಕರಣಾಗಾರದಲ್ಲಿ ನೀರಿನ ಗುಣಮಟ್ಟವನ್ನು ಪರೀಕ್ಷಿಸಲು ಸುಸಜ್ಜಿತ ಪ್ರಯೋಗಾಲಯ ಸ್ಥಾಪಿಸಲಾಗಿದೆ.<br><br>ಶೋರ್ ಗುಂಬಸ್, ಕೊಟನೂರು ಮತ್ತು ಹಳೇ ಫಿಲ್ಟರ್ ಬೆಡ್ ಜಲಶುದ್ಧೀಕರಣಾಗಾರದಲ್ಲಿ ಸುಸಜ್ಜಿತ ಪ್ರಯೋಗಾಲಯವಿದೆ.<br><br>ಪ್ರತಿ ದಿನ ಭೌತಿಕ, ರಾಸಾಯನಿಕ ಹಾಗೂ ಜೈವಿಕ ನೀರಿನ ಮಾದರಿಯನ್ನು ಪರೀಕ್ಷಿಸಿ ಕುಡಿಯುವ ನೀರಿನ ಗುಣಮಟ್ಟವನ್ನು CPHEEO ನಲ್ಲಿ ನಿಗಧಿಪಡಿಸಿರುವ ಮಾನದಂಡದಂತೆ ಪರೀಕ್ಷಿಸಲಾಗುತ್ತಿದೆ.<br><br>3 ಪ್ರಯೋಗಾಲಯಗಳಲ್ಲೂ 2 ಪಾಳಿಯಲ್ಲಿ ಒಬ್ಬೊಬ್ಬರು Chemist ಮತ್ತು ಇಬ್ಬರು ಸಹಾಯಕ ಸಿಬ್ಬಂದಿ, ಅಂದರೆ ಒಟ್ಟು 18 ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿರುತ್ತಾರೆ. |
| (ಆ) | ಕಲಬುರಗಿ ನಗರದಲ್ಲಿ ವಿಶ್ವಬ್ಯಾಂಕ್ ಯೋಜನೆಯಡಿ 24X7 ನೀರು ಸರಬರಾಜು ಯೋಜನೆಯನ್ನು ಯಾವಾಗ ಅನುಷ್ಠಾನಗೊಳಿಸಲಾಗುವುದು; ವಿಶ್ವಬ್ಯಾಂಕ್ ಯೋಜನೆಯಡಿ ಎಷ್ಟು ಅನುದಾನವನ್ನು ಪಡೆಯಲಾಗಿದೆ; (ವಿವರ ನೀಡುವುದು) | ವಿಶ್ವಬ್ಯಾಂಕ್ ನೆರವಿನಡಿಯಲ್ಲಿ ಕಲಬುರಗಿ ನಗರಕ್ಕೆ ನಿರಂತರ 24X7 ಕುಡಿಯುವ ನೀರು ಸರಬರಾಜು ಯೋಜನೆಯನ್ನು ಸರ್ಕಾರಿ ಆದೇಶದ ಸಂಖ್ಯೆ: UDD 279 PRJ 2018, ದಿನಾಂಕ:22/10/2018 ರಲ್ಲಿ ಡಿಬಿಓಟಿ (Design Build Operate & Transfer) ಮಾದರಿಯಲ್ಲಿ ಕೈಗೊಳ್ಳಲು ಆದೇಶವಾಗಿರುತ್ತದೆ. ಮೆ\|\|ಎಲ್&ಟಿ, ಚನ್ನೈ ರವರಿಗೆ ಸರ್ಕಾರಿ ಆದೇಶ ಸಂಖ್ಯೆ: UDD 96 PRJ 2020, ದಿನಾಂಕ:26/03/2020 ರಲ್ಲಿ ರೂ.837.43 ಕೋಟಿಗಳಿಗೆ (ಯೋಜನೆಯ ನಿರ್ಮಾಣ ಮೊತ್ತ ರೂ.604.95 ಕೋಟಿ ಮತ್ತು ಕಾರ್ಯಚರಣೆ & ನಿರ್ವಹಣೆ ಮೊತ್ತ ರೂ.232.48 ಕೋಟಿ) ಗುತ್ತಿಗೆ ನೀಡಲಾಗಿದೆ. ಕರಾರಿನ ಪ್ರಕಾರ ನಿಯಮಾನುಸಾರ ನಿರ್ಮಾಣ ಕಾಮಗಾರಿಯನ್ನು ದಿನಾಂಕ:09/06/2025 ರಲ್ಲಿ ಪೂರ್ಣಗೊಳಿಸಬೇಕಾಗಿತ್ತು. |

| ಕ್ರ. ಸಂ | ಪ್ರಶ್ನೆಗಳು | ಉತ್ತರ |
|---|---|---|
| | | ನಿಗಧಿತ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳ್ಳದ ಕಾರಣ ಜೂನ್-2027 ರವರೆಗೆ ಕಾಲ ವಿಸ್ತರಣೆಯನ್ನು ಮೆ\|\|ಎಲ್&ಟಿ, ಚನ್ನೈ ರವರ ಕೋರಿಕೆ ಮೇರೆಗೆ ದಂಡವಿಧಿಸಿ ವಿಸ್ತರಿಸಲಾಗಿದೆ. ಎಲ್ಲಾ ಕಾಮಗಾರಿಗಳನ್ನು ಜೂನ್-2027 ರೊಳಗೆ ಪೂರ್ಣಗೊಳಿಸಲು ಮೆ\|\|ಎಲ್ & ಟಿ, ಚನ್ನೈ ರವರಿಗೆ ಕಟ್ಟು ನಿಟ್ಟಿನ ಆದೇಶ ನೀಡಲಾಗಿದೆ.<br><br>ಪ್ರಸ್ತುತ ಕಲಬುರ್ಗಿ ನಗರದ ಕಾಮಗಾರಿಯು ಪ್ರಗತಿಯಲ್ಲಿದ್ದು, ಭೌತಿಕವಾಗಿ ಶೇ.55% ರಷ್ಟು ಹಾಗೂ ಆರ್ಥಿಕವಾಗಿ ಶೇ.40 ರಷ್ಟು ವೆಚ್ಚ ಮಾಡಲಾಗಿದೆ.<br><br>ಕಲಬುರಗಿ, ಬೆಳಗಾವಿ ಹಾಗೂ ಹುಬ್ಬಳ್ಳಿ-ಧಾರವಾಡ ಮೂರು ನಗರಗಳಿಗೂ ವಿಶ್ವ ಬ್ಯಾಂಕ್ ನಿಂದ ನೆರವನ್ನು ಸರ್ಕಾರಕ್ಕೆ ಬಿಡುಗಡೆಯಾಗುತ್ತದೆ. ತದನಂತರ ಸರ್ಕಾರದಿಂದ ಕೆ.ಯು.ಐ.ಡಿ.ಎಫ್.ಸಿ ಗೆ ಅನುದಾನವು ಬಿಡುಗಡೆಯಾಗುತ್ತದೆ.<br><br>ಈ ಯೋಜನೆಗೆ ಸರ್ಕಾರದಿಂದ ಇದುವರೆಗೆ ರೂ.353.45 ಕೋಟಿ ಬಿಡುಗಡೆಯಾಗಿರುತ್ತದೆ. ಇದುವರೆಗೆ ರೂ.427.01 ಕೋಟಿ ವೆಚ್ಚವಾಗಿರುತ್ತದೆ. ಸರ್ಕಾರದಿಂದ ಬಿಡುಗಡೆಯಾಗಿರುವ ಮೊತ್ತಕ್ಕಿಂತ ಹೆಚ್ಚುವರಿ ವೆಚ್ಚವಾಗಿರುವ ಮೊತ್ತವನ್ನು ನೀರಿನ ಕರ ಹಾಗೂ ನಗರ ಪಾಲಿಕೆಯ ವಂತಿಕೆಯಿಂದ ಭರಿಸಲಾಗಿದೆ. |
| ಇ) | ಕುಡಿಯುವ ನೀರಿನ ಘಟಕಗಳ ಕಾರ್ಯಚರಣೆ ಮತ್ತು ನಿರ್ವಹಣೆಯನ್ನು ಯಾವ ಕಂಪನಿಗೆ ವಹಿಸಲಾಗಿದೆ; ಇದಕ್ಕೆ ವಾರ್ಷಿಕ ತಗಲುವ ವೆಚ್ಚ ಎಷ್ಟು? | ಕಲಬುರಗಿ ನಗರಕ್ಕೆ ಕುಡಿಯುವ ನೀರು ಪೂರೈಸುವ ಭೀಮಾ ನದಿಯ ಮೂಲ, ಕುರಿಕೋಟ ಹಾಗೂ ಇದಕ್ಕೆ ಸಂಬಂಧಿಸಿದ ಜಲಶುದ್ಧೀಕರಣಗಾರ, ವಿತರಣಾ ಜಾಲ, ಜಲಸಂಗ್ರಹಗಾರಗಳು ಮತ್ತು ನಗರದಲ್ಲಿ ಬರುವ ಕೊಳವೆ ಬಾವಿಗಳ ನಿರ್ವಹಣೆಯನ್ನು ಮೆ\|\| ಎಲ್&ಟಿ, ಚನ್ನೈ ರವರೆ ನಿರ್ವಹಿಸಬೇಕಾಗಿದೆ ಹಾಗೂ ಇದಕ್ಕೆ ವಾರ್ಷಿಕ ನಿರ್ವಹಣೆಯ ವೆಚ್ಚ ರೂ.20,74,01,952/-ಗಳಷ್ಟಿರುತ್ತದೆ. |

ಕಡತ ಸಂಖ್ಯೆ:ನಅಇ 34 ಪಿಆರ್‌ಜೆ 2026

**(ಬಿ. ಎಸ್. ಸುರೇಶ)**
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು